<u>ದಿನಾಂಕಃ **22-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **10** ರ ಪರ ಶ್ರೀಬಿ.ಎಸ್.ಎನ್ ವಕೀಲರಿಂದಃ</u>

ನಾನು ನೀಡಿದ ಪ್ರಮಾಣ ಪತ್ರ ಮತ್ತು ಕಂದಾಯ ನಿರೀಕ್ಷಕರ ವರದಿಯನ್ನು ನಿಪಿ-29 ರ ಜೊತೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-29 ರಲ್ಲಿ ಕಂದಾಯ ನಿರೀಕ್ಷಕರು ಯಾವ ದಿನಾಂಕದಂದು ಬಂದು ವರದಿಯನ್ನು ತಯಾರಿಸಿರುತ್ತಾರೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಒಂದು ವೇಳೆ ಪ್ರಮಾಣ ಪತ್ರ ನೀಡಿದ್ದರೆ ಕಂದಾಯ ನಿರೀಕ್ಷಕರು ನಿಪಿ-29 ರಲ್ಲಿ ನಮೂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿಪಿ- 29 ರಲ್ಲಿ ನಮೂದಿಸಿರುವ ಎಸ್ ಆರ್ ದತ್ತಾತ್ರೇಯ ಇವರಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ನಿಪಿ-29 ರಲ್ಲಿ ರಾಮಚಂದ್ರ ಅಡಿಗ ಇವರ ತಂದೆ ಅಥವಾ ತಾಯಿಯ ಹೆಸರನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಎಸ್ ಆರ್ ಜಗದೀಶ್ ಈತನಿಗೆ ಹಂಡತಿ ಮತ್ತು ಮಕ್ಕಳು ಇರುವುದಿಲ್ಲ. ನಿಪಿ-29 ರಲ್ಲಿ ಯಥಾ ಪ್ರತಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

2. ನಿಪಿ- 29 ನ್ನು ಯಾರಿಗೆ ಕೊಟ್ಟ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ-29 ನ್ನು ನೋಂದಣಿ ಕಛೇರಿಯಲ್ಲಿ ನೋಂದಣಿ ಸಂಬಂಧ ಪಡೆದುಕೊಂಡಿರುತ್ತೇನೆ. ನಿಪಿ- 29 ರಲ್ಲಿ ನನ್ನ ವಿಳಾಸ ಇರುವುದಿಲ್ಲ ಎಂದರೆ ಸಾಕ್ಷಿ ನಾನೇ ಕಛೇರಿಗೆ ಹೋಗಿ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಧಿಗೆ ಒಂದು ಗ್ರಾಮವಿರುತ್ತದೆ ಎಂದರೆ ಸರಿ. ನಿಪಿ- 31 ರಲ್ಲಿ ಸಾವಿತ್ರಮ್ಮ ನವರು ಬಿ ಹೆಚ್ ರಸ್ತೆ ಶಿವಮೊಗ್ಗ ಎಂದು ವಿಳಾಸ ನಮೂದು ಇರುತ್ತದೆ ಎಂದರೆ ಸರಿ. ನಿಪಿ- 29 ಹಾಗೂ 31 ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಅವರು ಬೇರೆ ಬೇರೆ ವ್ಯಕ್ತಿಗಳು ಇರುತ್ತಾರೆ ಎಂದರೆ ಸರಿಯಲ್ಲ. ನಿಪಿ- 29 ರಲ್ಲಿ ಸಾವಿತ್ರಮ್ಮ ಎಂ ಆರ್ ಎಂದು ನಿಪಿ- 31 ರಲ್ಲಿ ಕೇವಲ ಸಾವಿತ್ರಮ್ಮ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ- 29 ಮತ್ತು 31 ರಲ್ಲಿ ಇರುವ ಸಾವಿತ್ರಮ್ಮ ಒಬ್ಬರೇ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಿಪಿ- 29 ಹಾಗೂ ನಿಪಿ- 32 ರಲ್ಲಿ ನಮೂದಿಸಿರುವ ಸಾವಿತ್ರಮ್ಮನವರು ವಿಳಾಸ ವ್ಯತ್ಯಾಸ ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ನಂತರ ನಾನು ಸುಳೇಬೈಲು ಗ್ರಾಮದಲ್ಲಿ ವಾಸ ಇದ್ದೆ ಹಾಗೂ 1995 ರಲ್ಲಿ ನಮ್ಮ ತಾಯಿ ತೀರಿಕೊಂಡಿದ್ದು ನಾವು old Bar line ಜಾಗವನ್ನು ಮಾರಾಟ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನಮ್ಮ ತಾಯಿ old Bar line ಮಂಜಯ್ಯ ಕಾಂಪೌಂಡ್ ನಲ್ಲಿ ವಾಸ ಇದ್ದು ಅವರು ರವಿ ಪಾಲಿ ಕ್ಲೀನಿಕ್ ನಲ್ಲಿ ತೀರಿಕೊಂಡಿರುತ್ತಾರೆ. ಈ ದಾವೆಯಲ್ಲಿ ನಾನು ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು 2021 ರಲ್ಲಿ ವಂಶವೃಕ್ಷವನ್ನು ತೆಗೆದುಕೊಂಡಿದ್ದು ಅದನ್ನು ಇನ್ನೊಂದು ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ವಂಶವೃಕ್ಷವನ್ನು ಕೇಸಿನ ಸಂಬಂಧ ತೆಗೆದುಕೊಂಡಿರುತ್ತೇನೆ. ಸದರಿ ವಂಶವೃಕ್ಷವನ್ನು ಈ ದಾವೆಯಲ್ಲಿ ಹಾಜುರಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅದು ಒಂದೇ ಕಾಪಿ ಇದೆ ಎಂದು ಉತ್ತರಿಸುತ್ತಾರೆ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ನಿಪಿ- 29 ರಿಂದ 32 ನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದುರುದ್ದೇಶದಿಂದ ವಂಶವೃಕ್ಷದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದು ಒಂದೇ ಕಾಪಿ ಇತ್ತು ಎಂದು ಉತ್ತರಿಸುತ್ತಾರೆ. ಸದರಿ ವಂಶವೃಕ್ಷವನ್ನು ನಾನು ನಾಡ ಕಛೇರಿಯಲ್ಲಿ ಪಡೆದುಕೊಂಡಿರುತ್ತೇನೆ. ನಾನು ವಂಶವೃಕ್ಷ ಪಡೆಯುವ ಕಾಲಕ್ಕೆ ಮರಣ ಪ್ರಮಾಣ ಪತ್ರ ಹಾಗೂ ಕುಟುಂಬ ಸದಸ್ಯರ ಆಧಾರ್ ಕಾರ್ಡ್ ನ್ನು ಕೊಟ್ಟಿರುತ್ತೇನೆ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ **13** ರ ಪರ ಶ್ರೀ ವಿ ಆರ್ ಎನ್ ವಕೀಲರಿಂದಃ</u>

ತುಳಸಮ್ಮ ಇವರ ಕೊನೆ ಕಾಲದಲ್ಲಿ ಜೆ ಟಿ ನಾಗರಾಜ್ ಇವರು ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಾವು ಮತ್ತು ಅವರು ನೋಡಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ತುಳಸಮ್ಮ ಇವರ ಜೊತೆ ಜೆ ಟಿ ನಾಗರಾಜ ಇದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು ನಾವು ಬಂದು ಹೋಗುತ್ತಿದ್ದೆವು ಎಂದ ಉತ್ತರಿಸುತ್ತಾರೆ. ದಾವಾ ಸ್ವತ್ತು 4 ತುಳಸಮ್ಮ ಇವರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. ಆ ಪ್ರಕಾರ ಅವರ ಹೆಸರಿಗೆ

ಖಾತೆ ಆಗಿರುತ್ತದೆ ಎಂದರೆ ಸರಿ. ತುಳಸಮ್ಮ ಇವರು ದಿನಾಂಕ 19.03.1994 ರಲ್ಲಿ ತೀರಿಕೊಂಡಿರುತ್ತಾರೆ. ತುಳಸಮ್ಮ ತೀರಿಕೊಂಡಾಗಿನಿಂದ ಈ ದಾವೆ ಸಲ್ಲಿಸುವವರೆಗೆ ದಾವಾ ಸ್ವತ್ತು 4 ರ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 7 ರವರು ನನಗೆ ಬಾಲ್ಯದಿಂದ ಗೊತ್ತಿರುತ್ತಾರೆ. ಪ್ರತಿವಾದಿ ನನ್ನ ಜೊತೆ ಈಗಲೂ ಚೆನ್ನಾಗಿ ಇರುತ್ತಾರೆ ಎಂದರೆ ಸರಿ. ಸದರಿ ರವೀಂದ್ರ ಇವರು ಸೀತಮ್ಮ ಇವರ ಮಗ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ 7 ರವರು ದಿನಾಂಕ 27.07.2020 ರ ಕ್ರಯ ಪತ್ರದಲ್ಲಿ 4 ನೇ ಮಾರಾಟಗಾರರು ಇರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ರವೀಂದ್ರ ಇವರು ತುಳಸಮ್ಮ ಮತ್ತು ಸಾವಿತ್ರಮ್ಮ ಮಕ್ಕಳು ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ನಾನೇ ಸಾವಿತ್ರಮ್ಮ ನವರ ಮಗ ಎಂದು ಉತ್ತರಿಸುತ್ತಾರೆ. ಪ್ರತಿವಾದಿ 7 ರವರು ಯಾವತ್ತೂ ಸುಳ್ಳನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

2. ಮೀನಾಕ್ಷಮ್ಮ ಇವರು 1964 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ-29 ನ್ನು ನಾನು ಶಿವಮೊಗ್ಗದ ತಹಶೀಲ್ದಾರರವರ ಕಛೇರಿಯಲ್ಲಿ 2006 ರಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-29 ರಲ್ಲಿ ಸಾವಿತ್ರಮ್ಮ ಇವರ ತಂದೆ ತಾಯಿ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಮದುವೆ ಆದ ಕಾರಣ ಅವರ ತಂದೆ ತಾಯಿ ಹೆಸರು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-30 ರಲ್ಲಿ ನಮ್ಮ ತಾಯಿಯ ಹೆಸರು ಇರುವುದಿಲ್ಲ ಎಂದರೆ ಸರಿ. ನಿಪಿ-31 ರಲ್ಲಿ ಸಾವಿತ್ರಮ್ಮ ಇವರ ತಂದೆಯ ಹೆಸರು ಇರುವುದಿಲ್ಲ ಎಂದರೆ ಸರಿ. ಸಾವಿತ್ರಮ್ಮ ಇವರು ತುಳಸಮ್ಮನವರು ತಂಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ- 32 ರಲ್ಲಿ ಸಾವಿತ್ರಮ್ಮ ತಾಯಿ ಮತ್ತು ಅಕ್ಕ ತಂಗಿಯರ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿ ಅವರ ತಂದೆಯ ಆಸ್ತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮ ಇವರು ಶಿವಮೊಗ್ಗದಲ್ಲಿ ವಾಸ ಇದ್ದರು. ಸಾವಿತ್ರಮ್ಮ ಇವರಿಗೆ ಯಾರು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ತಪ್ಪು ದಾರಿಗೆ ಎಳೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ. 13 ನೇ ಪ್ರತಿವಾದಿಯ ಮೇಲೆ ಯಾವುದೇ ತಕರಾರು

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಣ ಪಡೆಯುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ 4 ಮತ್ತು 7 ರ ಪರ ವಕೀಲರುಸಮಯ ಕೋರಿದ್ದು, ಸಮಯ ನಿರಾಕರಿಸಲಾಯಿತು. ಸೂಕ್ತ ಹಾಗೂ ಸಮಂಜಸ ಕಾರಣ ನೀಡದ ಕಾರಣ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 5 ಮತ್ತು 6 ರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 2,3 ಮತ್ತು 9 ರವರನ್ನು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರು ಗೈರು ಹಾಜರಿದ್ದು ಹಾಗೂ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 8 ರವರು ಏಕ ಪಕ್ಷೀಯ ಇರುವ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ